OS No. 16/2024

PW-1

**ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ.HSR ವಕೀಲರಿಂದಃ-**

ನನಗೆ ಈಗ 72 ವರ್ಷ ವಯಸ್ಸು, ನನ್ನ ತಂದೆ ಹೆಸರು ನರಸಯ್ಯ, ನನ್ನ ತಾಯಿ ಹೆಸರು ಮಲ್ಲಮ್ಮ, ನನ್ನ ತಂದೆಯ ತಂದೆ ಹೆಸರು ಮಲ್ಲಯ್ಯ, ಮಲ್ಲಯ್ಯನ ಹೆಂಡತಿ ಹೆಸರು ಮರಿಯಮ್ಮ, ಸರ್ವೆ ನಂಬರ 47 ಕ್ಕೆ ಈ ದಾವೆ ಸಲ್ಲಿಸಿದ್ದೇನೆ. ನಾನು ನಾಚವಾರ ನಿವಾಸಿ. ದಾವಾ ಸ್ವತ್ತು ಹುಳಗೋಳ ಗ್ರಾಮದಲ್ಲಿದ್ದೆ. ಸರ್ವೆ ನಂಬರ 47 ಒಟ್ಟು 8 ಎಕೆರೆ 9 ಗುಂಟೆ ಇದೆ. ಸದರಿ 8 ಎಕೆಗೆ 9 ಗುಂಟೆ ಚೆಕಬಂದಿ ಪೂರ್ವಕ್ಕೆ ನೀಲಮ್ಮ, ಪಶ್ಚಿಮ್ಮಕ್ಕೆ ಶಿವಕಾಂತಮ್ಮ, ಉತ್ತರಕ್ಕೆ ನಂದಪ್ಪ, ದಕ್ಷಿಣಕ್ಕೆ ಶಿವಶರಣಪ್ಪ ಹೂಗಾರ ರವರ ಜಮೀನು ಇದೆ. ದಾವಾ ಜಮೀನು ನನ್ನ ತಾಯಿಯ ತಾಯಿ ಮಾಣಿಕಮ್ಮ ರವರಿಗೆ ಸೇರಿತ್ತು. ಅವರಿಂದ ನನ್ನ ತಾಯಿಗೆ ನನ್ನ ತಾಯಿಯಿಂದ ನನಗೆ ಬಂದಿದೆ. ಮಾಣಿಕಮ್ಮ ರವರಿಗೆ ಇಬ್ಬರು ಮಕ್ಕಳು ಅವುರುಗಳೆಂದರೆ ಕಾಶಪ್ಪ ಮತ್ತು ಮಲ್ಲಮ್ಮ, ನಾನು 3 ವರ್ಷದವನಿದ್ದಾಗ ನನ್ನ ತಾಯಿ ತೀರಿಹೋಗಿದ್ದಾರೆ. ನನ್ನ ತಾಯಿ ತೀರಿಹೋದಾಗ ನನ್ನ ಅಜ್ಜಿ ಮಾಣಿಕಮ್ಮ ಬದುಕಿದ್ದರು. ಮಾಣಿಕಮ್ಮ 1977-78 ರಲ್ಲಿ ತೀರಿಹೋಗಿದ್ದಾರೆ. ಕಾಶಪ್ಪ ಕೂಡ ಹೆಚ್ಚು ಕಡಿಮೆ ನನ್ನ ತಾಯಿ ತೀರಿಹೋದಾಗ ತೀರಿಹೋಗಿದ್ದಾರೆ. ಕಾಶಪ್ಪನ ಮಕ್ಕಳು ಆಗಿತ್ತು. ಅವರಿಗೆ ಮಕ್ಕಳು ಆಗಿರಲಿಲ್ಲ, ಕಾಶಪ್ಪನ ಹೆಂಡತಿ ಹೆಸರು ಬಂದೆಮ್ಮ, ಬಂದೆಮ್ಮ ಕೂಡ ತೀರಿಹೋಗಿದ್ದಾರೆ.

1962 ರಲ್ಲಿ ಮಾಣಿಕಮ್ಮ ಗಂಡ ಭೀಮಯ್ಯ ಕಲಾಲ ರವರಿಂದ ರಾಮಲಿಂಗಪ್ಪ ತಂದೆ ಶಿವಪ್ಪ ಯರಗೋಳ, ಸಾ|| ಹುಳಗೋಳ ರವರು ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಖರೀದಿ ಪತ್ರದಲ್ಲಿ ಕೇವಲ 1 ಎಕರೆ 15 ಗುಂಟೆ ಎಂದ ನಮೂದು ಇದೆ ಎಂದು ಹೇಳುತ್ತಾರೆ. ರಾಮಲಿಂಗಪ್ಪ ಮಾಣಿಕಮ್ಮ ರವರಿಂದ ಜಮೀನು ಖರೀದಿ ಮಾಡಿದ್ದಾರೆ ಎಂದು ತೋರಿಸಲು ನಾನು ನಿಪಿ-4 ಮುಟೇಷನ್ನು ಹಾಜುಪಡಿಸಿದ್ದೇನೆ ಎಂದರೆ ಸರಿ. ನಿಪಿ-4 ರ ಕಾಲಂ ನಂಬರ 6 ರಲ್ಲಿ ದಿಃ 15-01-1962 ರಂದು ಖರೀದಿ ಆಗಿದೆ ಎಂದು ಮುಟೇಷನ ಆಗಿದೆ ಎಂದರೆ ಸರಿಯಲ್ಲ, ಮಾಣಿಕಮ್ಮನ ಜೊತೆ ತಿಪಯ್ಯ ಮತ್ತು ಹಣಮಯ್ಯ ಕೂಡ ಜಮೀನು ಖರೀದಿ ನೀಡಿದ್ದಾರೆ ಎಂದರೆ ಸರಿಯಲ್ಲ, ಅವರು ಖರೀದಿ ನೀಡಿದ ಪ್ರಕಾರ ಮುಟೇಷನ ಆಗಿದೆ ಎಂದರೆ ಸರಿಯಲ್ಲ, ಸದರಿ ಮುಟೇಷನ ಪ್ರಕಾರ 1962 ರಿಂದ ರಾಮಲಿಂಗಪ್ಪ ದಾವಾ ಸ್ವತ್ತಿನ ಮಾಲಿಕರಾಗಿ

ಕಬ್ಜಾದಲ್ಲಿದ್ದರೆ ಎಂದರೆ ಸರಿಯಲ್ಲ. ನಿಪಿ-6 ರಿಂದ 13 ರಲ್ಲಿ ಜಮೀನು ರಾಮಲಿಂಗಪ್ಪನ ಹೆಸರಿನಲ್ಲಿ ಮತ್ತು ನಂತರ ಅವರ ಮಗಳು ಪ್ರತಿವಾದಿ ಹೆಸರಿನಲ್ಲಿ ಜಮೀನು ಇತ್ತು ಎಂದರೆ ಸರಿಯಲ್ಲ. ಅದರಂತೆ 1962 ರಿಂದ ರಾಮಲಿಂಗಪ್ಪ ಮತ್ತು ನಂತರ ಅವರ ಮಗಳು ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಮಾಲಿಕರಾಗಿ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ಆಬಗ್ಗೆ ನಾನು ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳ ಕಬ್ಜಾ ಮತ್ತು ಮಾಲಿಕತ್ವ ಕಾಲಂನಲ್ಲಿ ರಾಮಲಿಂಗಪ್ಪ ಮತ್ತು ಪ್ರತಿವಾದಿ ಹೆಸರು ಉಲ್ಲೇಖ ಇದೆ ಎಂದರೆ ಸರಿಯಲ್ಲ.

ಈ ದಾವೆ ಸಲ್ಲಿಸುವ ಸಲುವಾಗಿ ನಿಪಿ-15 ಸುಳ್ಳು ವಂಶಾವಳಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕಂದಾಯ ದಾಖಲಾತಿಗಳಲ್ಲಿ 1962 ರಿಂದ ಇಲ್ಲಿಯವರೆಗೆ ನಮ್ಮ ಕುಟುಂಬದ ಯಾವ ಒಬ್ಬ ಸದಸ್ಯರ ಹೆಸರು ಪಹಣಿಯಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಕೇವಲ 1 ಎಕರೆ 9 ಗುಂಟೆ ಖರಿದಿ ಆಗಿದ್ದು ಉಳಿದ ಜಮೀನು ಮಾಣಿಕಮ್ಮ ಮತ್ತು ನನ್ನ ತಾಯಿಗೆ ಇತ್ತು ಎಂದು ತೋರಿಸಲು ದಾಖಲಾತಿ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹುಟ್ಟಿನಿಂದ ನಾಚವಾರದಲ್ಲಿದ್ದು ಈಗಲೂ ನಾಚವಾರದಲ್ಲಿ ವಾಸ ಇದ್ದೇನೆ ಎಂದರೆ ಸರಿ. ಸಂಬಂಧಿಕರ ಮದುವೆಗೆ ಬಂದಾಗ ಕಾನೂನು ಬಾಹಿರಮುಟೇಷನ ಬಗ್ಗೆ ನನಗೆ ದಿಃ 08-12-2023 ರಂದು ಗೊತ್ತಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆದಿನ ಯಾವುದೆ ಮದುವೆಗೆ ನಾನು ಹುಳಗೋಳಕ್ಕೆ ಬಂದಿರಲಿಲ್ಲ ನನಗೆ ಮುಂಚಿನಿಂದ ಮುಟೇಷನ ಬಗ್ಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಹಿಂದೆ ನಾವು ದಾವಾ ಜಮೀನಿನಲ್ಲಿ ಸ್ವಾಧಿನದಲ್ಲಿ ಇದ್ದೆವು ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಜಮೀನನ್ನು ಕೌಲಿಗೆ ಕೊಟ್ಟಿದ್ದೆವು ನಂತರ ಅವರು ಸ್ವಾಧಿನ ಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಣಿಕಮ್ಮ ಮತ್ತು ಇತರರು ಮಾರಾಟ ಮಾಡಿದ ನಂತರ ಕಾನೂನು ಪ್ರಕಾರ ರಾಮಲಿಂಗಪ್ಪ ನಂತರ ಪ್ರತಿವಾದಿ ದಾವಾ ಸ್ವತ್ತಿನ ಸಂಪೂರ್ಣ ಮಾಲಿಕರಾಗಿ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ನಾವು ದಾವಾ ಜಮೀನನ್ನು ಬೇರೆಯವರಿಗೆ ಕೌಲಿಗೆ ಕೊಟ್ಟಿದ್ದೆವು ಎಂದು ತೋರಿಸಲು ದಾಖಲಾತಿ

ಹಾಜುರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸುಳ್ಳು ಚೆಕಬಂದಿ ತೋರಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರಾ ಪ್ರತಿವಾದಿಯ ತಂದೆ ದಾವಾ ಜಮೀನಿನ ಮಾಲಿಕರಾಗಿ ಕಬ್ಜಾಗೆ ಬಂದಿದ್ದು ಈಗ ಪ್ರತಿವಾದಿ ಮಾಲಿಕರಾಗಿ ಕಬ್ಜಾದಲ್ಲಿದ್ದು ನನಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ಮಾಣಿಕಮ್ಮ ಮತ್ತು ಇತರರು 1962 ರಲ್ಲಿ ರಾಮಲಿಂಗಪ್ಪ ರವರಿಗೆ ದಾವಾ ಜಮೀನು ಖರೀದಿ ಕೊಟ್ಟ ಕಾರಣ ಅಂದಿನಿಂದ ನಮಗೂ ದಾವಾ ಜಮೀನೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಪ್ರತಿವಾದಿಯಿಂದ ಹಣ ಪಡೆಯಬೇಕೆಂದ ದುರುದ್ದೇಷದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹುಳಗೋಳ ಗ್ರಾಮಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಾಚವಾರದ ಸರ್ವೆ ನಂಬರ 42 ರಲ್ಲಿ 9 ಎಕರೆ 38 ಗುಂಟೆ ನನ್ನ ತಂದೆ ಹೆಸರಿನಲ್ಲಿತ್ತು. ನಂತರ ಆ ಜಮೀನನ್ನು ಭಾಗ ಮಾಡಿಕೊಂಡು ಮಾರಾಟ ಮಾಡಿದ್ದೇವೆ. ಈಗ ನಮಗೆ ಯಾವುದೇ ಜಮೀನು ಇಲ್ಲದ ಕಾರಣ ವಿನಃ ಕಾರಣ ಪ್ರತಿವಾದಿ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೆವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಳು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**